ಕರ್ನಾಟಕ ಸರ್ಕಾರ
**"ಮಕ್ಕಳ ರಕ್ಷಣೆ-ಶಿಕ್ಷಣ ಬಲವರ್ಧನೆ-ನಮ್ಮೆಲ್ಲರ ಹೊಣೆ"**
**ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಡಿ.ಸುಬ್ಬಯ್ಯ ರಸ್ತೆ,**
**ಇ-ಮೇಲ್: ddpimys@gmail.com & ddpi.edu.karmys@nic.in**
**ದೂರವಾಣಿ 0821-2490025**

---

ಗೆ, ದಿನಾಂಕ: 29/10/2018

ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,

ಮಾನ್ಯರೆ,

ವಿಷಯ: ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಕ್ಕೆ ದಿನಾಂಕ & ಸ್ಥಳ ನಿಗಧಿಯಾಗಿರುವ ಬಗ್ಗೆ,

ಉಲ್ಲೇಖ: ಆಯುಕ್ತರು, ಸಾ.ಶಿ. ಇಲಾಖೆ, ಬೆಂಗಳೂರು ಆದೇಶ ಸಂಖ್ಯೆ: ನಾ.ನ್ಯ.ಸಂ.ವಿ.ರಾ.ಮ.ಪ್ರ.ಕಾ ಹಾಗೂ ಕಲೋತ್ಸವ 2018-19, ದಿನಾಂಕ: 28/08/2018.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ 2018-19 ನೇ ಸಾಲಿನ ರಾಜ್ಯ ಮಟ್ಟದ ವಿದ್ಯಾರ್ಥಿಗಳ ಪ್ರತಿಭಾ ಕಾರಂಜಿ ( 8 ರಿಂದ 10ನೇ ತರಗತಿ) ಮತ್ತು ಕಲೋತ್ಸವ ಸ್ಪರ್ಧೆಗಳನ್ನು (9 ರಿಂದ 12 ನೇ ತರಗತಿ) ದಿನಾಂಕ 22/11/2018 ರಿಂದ 24/11/2018 ರವರೆಗೆ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಹುಣಸೂರು ರಸ್ತೆ, ಮೈಸೂರು ಈ ಆವರಣದಲ್ಲಿ** ನಡೆಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕಳೆದ ಸಾಲಿನಲ್ಲಿ ಬಳ್ಳಾರಿಯಲ್ಲಿ ನಡೆದ ರೀತಿಯಲ್ಲಿಯೇ ಆನ್‌ಲೈನ್ ನಲ್ಲಿ ನೋಂದಣಿ ಪ್ರಕ್ರಿಯೆಗೆ ಅವಕಾಶ ಕಲ್ಪಿಸಲಾಗುವುದು. ಅದಕ್ಕೆ ಸಂಬಂಧಿಸಿದಂತೆ ಸದ್ಯದಲ್ಲಿಯೇ ತಮ್ಮ ಇ-ಮೇಲ್ ವಿಳಾಸಕ್ಕೆ ಮಾಹಿತಿಯನ್ನು ರವಾನಿಸಲಾಗುವುದು. ಭಾಷಣ ಮತ್ತು ಚರ್ಚಾಸ್ಪರ್ಧೆಗಳಿಗೆ ತಲಾ 3 ವಿಷಯಗಳನ್ನು ಆಯ್ಕೆ ಮಾಡಲಾಗಿದ್ದು ಸ್ಪರ್ಧೆಗೆ ಒಂದು ಗಂಟೆ ಮೊದಲು ತಲಾ ಒಂದು ವಿಷಯವನ್ನು ಪ್ರಕಟಿಸಲಾಗುವುದು.

**ಭಾಷಣ:**
1. ಭೂಮಿಯ ತಾಪಮಾನ ಏರಿಕೆ-ಕಾರಣ, ಪರಿಣಾಮ ಮತ್ತು ಪರಿಹಾರೋಪಾಯಗಳು
2. ಪ್ರಸ್ತುತ ಸಾವಯವ ಕೃಷಿಯ ಮಹತ್ವ
3. ಸ್ವಚ್ಛಭಾರತ ನಿರ್ಮಾಣದಲ್ಲಿ ವಿದ್ಯಾರ್ಥಿಗಳ ಪಾತ್ರ.

(ಎಲ್ಲಾ ಭಾಷೆಗಳಿಗೂ ಇದೇ ವಿಷಯ ಅನ್ವಯಿಸುತ್ತದೆ)

**ಚರ್ಚಾಸ್ಪರ್ಧೆ :**
1. ಡಿಜಿಟಲ್ ತಂತ್ರಜ್ಞಾನದ ಬಳಕೆಯಿಂದ ಮಾತ್ರ ಗುಣಮಟ್ಟದ ಶಿಕ್ಷಣ ಸಾಧ್ಯ.
2. ಪ್ರಜಾಪ್ರಭುತ್ವದ ವ್ಯವಸ್ಥೆಯಿಂದ ಮಾತ್ರವೇ ಸುಭದ್ರ ದೇಶದ ನಿರ್ಮಾಣ ಸಾಧ್ಯ.
3. ಪ್ರಸ್ತುತ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಕೌಶಲ್ಯಾಭಿವೃದ್ಧಿಯೊಂದೇ ಪರಿಹಾರ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು.

**ಪ್ರತಿಯನ್ನು ಗೌರವಪೂರ್ವಕವಾಗಿ,**

**1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.**

**2. ಮಾನ್ಯ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.**

**3. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.**

**4. ಮಾನ್ಯ ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.**